# ಎಸಿಟಿ ಬ್ರಾಡ್‌ಬ್ಯಾಂಡ್‌ನಿಂದ ವೇಗದ ಫೈಬರ್‌ನೆಟ್ ಸೇವೆ

**ಬೆಂಗಳೂರು:** ಸೆಕೆಂಡಿಗೆ 60 ಎಂಬಿ ವೇಗ ನೀಡುವ 'ಎಸಿಟಿ ಫೈಬರ್‌ನೆಟ್' ಅಂತರ್ಜಾಲ ಸೇವೆಯನ್ನು ಎಸಿಟಿ ಬ್ರಾಡ್‌ಬ್ಯಾಂಡ್ ಸಂಸ್ಥೆ ಪರಿಚಯಿಸಿದೆ.

ಫೈಬರ್‌ನೆಟ್ ಸೇವೆಯಲ್ಲಿ ಮನೆಗಳಿಗೆ ಕೇಬಲ್ ಸಂಪರ್ಕದ ಮೂಲಕ ವೇಗವಾದ ಅಂತರ್ಜಾಲ ದೊರೆಯುತ್ತದೆ. ಸಂಪರ್ಕ ಪಡೆದ ಮನೆ ಬಳಿಯೇ ಅಂತರ್ಜಾಲ ಉಪಕರಣ ಅಳವಡಿಸಲಾಗುತ್ತದೆ. ಇದರಿಂದ 80 ಮೀ. ಅಂತರದಲ್ಲಿ 8 ಮನೆಗಳಿಗೆ ಒಂದೇ ಉಪಕರಣದಿಂದ ಸೇವೆ ನೀಡಬಹುದು. ಮೊಬೈಲ್, ಟಿವಿ, ಲ್ಯಾಪ್‌ಟಾಪ್ ಸಾಧನಗಳಿಂದ ಪ್ರತಿ ಸೆಕೆಂಡಿಗೆ 60 ಎಂಬಿ ವೇಗ ನೀಡುವ ಸೇವೆ ಬಳಸಬಹುದು. ₹1,999ಕ್ಕೆ ಸಂಪರ್ಕ ಪಡೆಯಬಹುದಾಗಿದ್ದು, ಮೊದಲಿಗೆ 100 ಜಿಬಿ ಉಚಿತವಾಗಿ ನೀಡಲಾಗುತ್ತದೆ. ₹675 ಕ್ಕೆ 20 ಜಿಬಿ, ₹849ಕ್ಕೆ 30 ಜಿಬಿ ಸೇರಿದಂತೆ ಹಲವು ಪ್ಯಾಕೇಜ್ ನೀಡಲಾಗಿದೆ. ಸುದ್ದಿಗೋಷ್ಠಿಯಲ್ಲಿ ಹೊಸ ಸೇವೆ ಬಿಡುಗಡೆಗೊಳಿಸಿ ಮಾತನಾಡಿದ ಸಂಸ್ಥೆಯ ಮುಖ್ಯಸ್ಥ ಬಾಲ ಮಲ್ಲಾಡಿ, ದೇಶಾದ್ಯಂತ 1.6 ಕೋಟಿ ಜನರಿಗೆ ಸಂಸ್ಥೆ ಅಂತರ್ಜಾಲ ಸೇವೆ ನೀಡುತ್ತಿದೆ. ಫೈಬರ್‌ನೆಟ್ ವ್ಯವಸ್ಥೆಯನ್ನು ಹೂಡಿಕೆದಾರರ ಮೂಲಕ ಗ್ರಾಹಕರಿಗೆ ಶೀಘ್ರ ತಲುಪಿಸಲಾಗುವುದು. ನೆಲದ ಕೆಳಗೆ ಕೇಬಲ್ ಅಳವಡಿಕೆಗೆ ಹೋಲಿಸಿದರೆ, ಫೈಬರ್‌ನೆಟ್ ಕೇಬಲ್ ಸಂಪರ್ಕ ಸರಳವಾಗಿದ್ದು ಅಡಚಣೆ ಕಡಿಮೆಯಾಗಲಿದೆ. ಮುಂದಿನ 18 ತಿಂಗಳಲ್ಲಿ 10 ಲಕ್ಷ ಗ್ರಾಹಕರನ್ನು ತಲುಪುವ ಗುರಿಯಿದೆ ಎಂದರು.